# ನಕ್ಕುಬಿಡಿ



**ಸುಮಂತ್:** ಕೃಷ್ಣ, ಮನೆಯಲ್ಲಿ ಮೊಬೈಲ್ ಕೆಟ್ಟರೆ ಅದಕ್ಕೆ ಮಕ್ಕಳೇ ಕಾರಣ ಅಂತಾರೆ, ಒಂದು ವೇಳೆ ಮಕ್ಕಳೇ ಕೆಟ್ಟರೆ?

**ಕೃಷ್ಣ:** ಅನುಮಾನವೇ ಇಲ್ಲ, ಆಗಲೂ ಮೊಬೈಲೇ ಕಾರಣ ಅಂತಾರೆ.

***

**ಯೋಗಾ ಗುರು:** ಕುಡಿತ ಬಿಟ್ಟು ಬಿಡುವ ಯೋಗಾಭ್ಯಾಸ ಮಾಡಿಸಿದ್ದೆ. ಈಗ ನಿಮ್ಮ ಮನೆಯವರಲ್ಲಿ ಏನಾದರೂ ಸುಧಾರಣೆ ಆಗಿದೆಯಾ?

**ಆಕೆ:** ಬಹಳ ಸುಧಾರಣೆ ಆಗಿದೆ. ಈಗ ತಲೆಕೆಳಗಾಗಿದ್ದುಕೊಂಡೇ ಇಡೀ ಬಾಟಲಿಯನ್ನೇ ಖಾಲಿ ಮಾಡ್ತಾರೆ.

***

**ಆಕೆ:** ನಮ್ಮ ಮನೆ ಕೆಲಸದಾಕೆ ನಳಿನಿ ಮೂರು ದಿನದಿಂದ ನಾಪತ್ತೆಯಾಗಿದ್ದಾಳೆ, ಹುಡುಕಿಕೊಡಿ ಸಾರ್.




ನಿರುದ್ಯೋಗ ಸಮಸ್ಯೆ ಈಗಲೇ ಪರಿಹರಿಸಿದರೆ ಮುಂದೆ ಮತ ಕೇಳೋಕೆ ವಿಷಯವೇ ಇರೊಲ್ಲ!

**ಪೊಲೀಸ್:** ಇದೇನಮ್ಮಾ ಕೆಲಸದವಳ ಬಗ್ಗೆ ಇಷ್ಟು ಕಾಳಜಿ? ಇನ್ನೊಬ್ಬಾಕೆಯನ್ನು ನೇಮಿಸಿಕೊಂಡರೆ ಆಗೋದಿಲ್ಲವೆ?

**ಆಕೆ:** ಅದು ಸಾಧ್ಯವೇ ಇಲ್ಲ ಸಾರ್, ಆಕೆ ನಾಪತ್ತೆಯಾಗಿರೋದು ನನ್ನ ಮಗನ ಜೊತೆಯಲ್ಲಿ.

***

**ಪ್ರೇಯಸಿ:** ಮದುವೆಯಾದ ಮೇಲೆ ನಿಮ್ಮೆಲ್ಲ ಕಷ್ಟಗಳಲ್ಲಿ ಭಾಗಿಯಾಗುವೆ.

**ಪ್ರಿಯಕರ:** ಸದ್ಯಕ್ಕೆ ಈಗ ನನಗೆ ಯಾವ ಕಷ್ಟಗಳೂ ಇಲ್ಲ.

**ಪ್ರೇಯಸಿ:** ನಾನು ಮದುವೆಯಾದ ಮೇಲೆ ನಿಮಗೆ ಕಷ್ಟಗಳು ಒಂದೊಂದಾಗಿಯೇ ಶುರುವಾಗುತ್ತವೆ.

***

**ಪತ್ರಕರ್ತ:** ಮೇಡಂ, ನೀವು ಮದುವೆಯಾದ ಮೇಲೆ ಚಿತ್ರಗಳಲ್ಲಿ ನಟಿಸುವುದಿಲ್ಲವೇ?

**ನಟಿ:** ನನ್ನವರು ಒಪ್ಪಿದರೆ ನಟಿಸುತ್ತೇನೆ.

**ಪತ್ರಕರ್ತ:** ಅವರು ಒಪ್ಪಲಿಲ್ಲ ಅಂದ್ರೆ ನಟನೆಯನ್ನು ಬಿಟ್ಟು ಬಿಡುತ್ತೀರಾ?

**ನಟಿ:** ಇಲ್ಲ, ಒಪ್ಪದಿದ್ದರೆ ಅವರನ್ನೇ ಬಿಟ್ಟು ಬಿಡುತ್ತೇನೆ.

***

**ಪತ್ನಿ:** ನೀರು ಕಾಯಿಸಿಲ್ಲ ಅಂತ ಬೈದು ಕಣ್ಣೀರು ತರಿಸಿದ್ರಿ. ನಾನು ನೀರು ಏಕೆ ಕಾಯಿಸಲಿಲ್ಲ ಅಂತ ಗೊತ್ತೆ? ತಣ್ಣೀರು ಸ್ನಾನ ಆರೋಗ್ಯಕ್ಕೆ ಒಳ್ಳೆಯದು ಅಂತ ಪುಸ್ತಕದಲ್ಲಿ ಓದಿದ್ದೆ.

**ಪತಿ:** ಹೌದಾ, ನಾನು ನಿನ್ನ ಬೈದು ಕಣ್ಣೀರು ತರಿಸಿದ್ದು ಏಕೆ ಗೊತ್ತಾ? ಅತ್ತಾಗ ಬರುವ ಕಣ್ಣೀರಿನಿಂದ ಕಣ್ಣು ಸ್ವಚ್ಛವಾಗುತ್ತದೆ ಅಂತ ನಾನು ಒಂದು ವಿಜ್ಞಾನ ಪುಸ್ತಕದಲ್ಲಿ ಓದಿದ್ದೆ.

***

**ಪ್ರತಿಭಾ:** ಸುಲೋಚನಾ, ನಿನ್ನ ಮೂರು ಮಕ್ಕಳ ಹೆಸರಿನ ಕೊನೆಗೆ 'ಣ'ಕಾರ ಬರಲು ಕಾರಣ?

**ಸುಲೋಚನಾ:** ಮೊದಲನೆಯವ ಕಿರಣ ಹುಟ್ಟಿದಾಗ ಸೂರ್ಯೋದಯವಾಗುತ್ತಿತ್ತು. ಎರಡನೆಯವ ಅರುಣ ಹುಟ್ಟಿದಾಗ ಸೂರ್ಯ ಹುಟ್ಟಿ ಕೆಂಪಾಗಿ ಕಾಣುತ್ತಿದ್ದ. ಮೂರನೆಯವ ವರುಣ ಹುಟ್ಟಿದಾಗ ಮಳೆ ಬರ್ತಾ ಇತ್ತು.

—ಶಂಕರೇಗೌಡ ತುಂಬಕೆರೆ, ಮಂಡ್ಯ


